ನಡೆದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದರಲ್ಲಿ ಕನಿಷ್ಠ ಸ್ಥಳೀಯ ಸಮಸ್ಯೆ ಮತ್ತು ಅಲ್ಲಿನ ದೇಸಿ ಪರಂಪರೆಗಳ ಕುರಿತು ಗಮನಿಸಬೇಕಾದ ಚರ್ಚೆಗಳು ನಡೆದವು. ಹಾಗೆ ನೋಡಿದರೆ ಈ ಭಾಗದ ಶೇ.80ರಷ್ಟು ಜನರು ತೆಲುಗು ಮಾತನಾಡುತ್ತಾರೆ. ಹೀಗಿದ್ದರೂ ಅವರು ಆ ಭಾಷೆಯ ಜತೆಗೆ ನಂಟನ್ನು ಬೆಳೆಸಿಕೊಂಡು ಕನ್ನಡವನ್ನು ಇಷ್ಟಪಡುತ್ತಾರೆ. ಈ ಭಾಗದ ಬಹುದೊಡ್ಡ ಸಮಸ್ಯೆ ಕುಡಿಯುವ ನೀರಿನದು. ವೇದಿಕೆಯಲ್ಲಿ ಇದರ ಸತ್ಯಗಳಿಗೆ ಜನ ಸ್ಪಂದಿಸಿದರು. ಈ ಭಾಗದ ಎರಡನೇ ಬಹುದೊಡ್ಡ ಸಮಸ್ಯೆ ದಟ್ಟ ಬರಗಾಲದ್ದು. ಒಂದೇ ಬೆಳೆಯನ್ನು ಬೆಳೆಯುವುದರಿಂದ ಆಗುವ ಅಪಾಯಗಳ ಕುರಿತ ಮಾತುಕತೆಗೆ ಜನ ಸ್ಪಂದಿಸಿದ್ದು ಸುಳ್ಳಲ್ಲ. ಅಂದರೆ ಯಾವುದೇ ಸಮ್ಮೇಳನ ಉತ್ಸವ, ಸಂಭ್ರಮಗಳಲ್ಲಿ ನಡೆಯುವ ಬರೀ ಸಾಹಿತ್ಯ ಮತ್ತು ನಿರ್ದಿಷ್ಟ ಸಿದ್ಧಾಂತಗಳ ಕೇಂದ್ರಿತ ಸಂವಾದಗಳಿಂದ ಯಾವ ಪ್ರಯೋಜನಗಳೂ ಇಲ್ಲ.

ವಾಸ್ತವವಾಗಿ ಇದುವರೆಗಿನ ಯಾವ ಸಮ್ಮೇಳನಗಳೂ, ಸಂಭ್ರಮ–ಉತ್ಸವಗಳೂ ಕನ್ನಡ ಮಾಧ್ಯಮದ ಸವಾಲು ಸಮಸ್ಯೆಗಳನ್ನು ಹಾಗೂ ಉನ್ನತ ಶಿಕ್ಷಣ ಮಟ್ಟದ ಕನ್ನಡ ಬೋಧಕನ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುತ್ತಲೇ ಇಲ್ಲ. ಕ್ವಚಿತ್ತಾಗಿ ನಡೆದರೂ ಸರ್ಕಾರದ ಗಮನಕ್ಕೆ ಬಾರದೇ ಉಳಿದಿದೆ. ಹಾಗಾದರೆ ಇವರ ಉದ್ದೇಶಗಳಾದರೂ ಏನು? ಕೇವಲ ವಾರ್ಷಿಕ ಸಮ್ಮೇಳನ, ಸಂಭ್ರಮ, ಉತ್ಸವಗಳನ್ನು ಮಾಡುವುದೇ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಸುಲಭವೂ ಅಲ್ಲ. ಆದ್ದರಿಂದಲೇ ಈಗಿನ ಸಮಾಜಕ್ಕೆ ಸಾಹಿತ್ಯದಿಂದ ಆಗಬೇಕಾದ ಪ್ರಯೋಜನಗಳೇನು ಎಂಬ ಪ್ರಶ್ನೆಗೆ ಉತ್ತರಿಸಲು ತಡಕಾಡಬೇಕಾಗುತ್ತದೆ. ಇನ್ನು ಇಂಥ ಕಡೆ ನಡೆಯುವ ಸಂವಾದಗಳಂತೂ ಅನೇಕ ಬಾರಿ ಜಡಗೊಂಡು ವೈಯಕ್ತಿಕ ಹಿತಾಸಕ್ತಿಗಳೇ ಮುಖ್ಯವಾಗುತ್ತವೆ. ಇಷ್ಟಿದ್ದರೂ ಕನ್ನಡವನ್ನು ಅದರ ಸಾಹಿತ್ಯವನ್ನು ಇಷ್ಟಪಡುವ ಜನಸಮುದಾಯ ಇದ್ದೇ ಇದೆ. ಈ ಕುರಿತು ನಾವು ತೀರಾ ನಿರಾಶರಾಗಬೇಕಾಗಿಲ್ಲ. ಇನ್ನು ನಾವು ಇದೇ ಸಂದರ್ಭದಲ್ಲಿ ಕೇಳಿಕೊಳ್ಳಬೇಕಾದ ಬಹುದೊಡ್ಡ ಪ್ರಶ್ನೆ ಎಂದರೆ ಸಮ್ಮೇಳನ, ಉತ್ಸವ, ಸಂಭ್ರಮ ಇತ್ಯಾದಿ ವೇದಿಕೆಗಳು ಹೊಸ ತಲೆಮಾರಿನ ಬರಹಗಾರರನ್ನು, ಓದುಗರನ್ನು ಎಷ್ಟರ ಮಟ್ಟಿಗೆ ಒಳಗುಮಾಡಿಕೊಳ್ಳುತ್ತಿವೆ ಎಂಬುದು. ಹಾಗೆ ನೋಡಿದರೆ ಹಲವು ಬಾರಿ ವೇದಿಕೆಗಳಲ್ಲಿ ಮತ್ತು ಸಂವಾದಗಳಲ್ಲಿ ಹೊಸ ಓದುಗರು, ಬರಹಗಾರರು ಇರುವುದೇ ಇಲ್ಲ.

ಸಾಹಿತ್ಯ ಸಮ್ಮೇಳನಗಳಲ್ಲಿ ಒಟ್ಟು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಒಳಗೊಂಡಂತೆ ಚರ್ಚೆಗಳ ಮೂಲಕ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆಮಾಡುವುದು ಒಂದು ಬದ್ಧತೆ. ಈ ಕೆಲಸವನ್ನು ಕೆಲವು ಸಮ್ಮೇಳನಗಳು ಕಾಲ ಕಾಲಕ್ಕೆ ಮಾಡುತ್ತಲೇ ಇವೆ. ಕನ್ನಡ ಭಾಷೆ ಉಳಿಯಬೇಕಾದರೆ ಮೊದಲು ಮಾಧ್ಯಮ ಮತ್ತು ಕನ್ನಡ ಬೋಧಕನ ಸಮಸ್ಯೆಗಳಿಗೆ ಸ್ಪಂದಿಸುವುದು ಆಗಬೇಕಾದ ಬಹುದೊಡ್ಡ ಕೆಲಸ. ಈಗ ಬದುಕು ಕಟ್ಟುವ ಕೆಲಸವಾಗಬೇಕೇ ಹೊರತು ವೈಯಕ್ತಿಕ ಹಿತಾಸಕ್ತಿ ಮತ್ತು ಅಜೆಂಡಾಗಳಲ್ಲ. ಈ ಬಗೆಯ ಚರ್ಚೆಗಳಿಗೆ ಬೇರೊಂದು ವೇದಿಕೆಗಳನ್ನು ಸೃಷ್ಟಿಮಾಡಬಹುದು. ವೈವಿಧ್ಯತೆಯನ್ನೇ ಉಸಿರಾಡುವ ಕರ್ನಾಟಕದಂತಹ ಪ್ರದೇಶಗಳಿಗೆ ಬೇಕಾಗುವುದು ಹಲವುತನಗಳ ಮಾತುಗಳನ್ನು, ಪ್ರಶ್ನೆಗಳನ್ನು, ಸಂವಾದಗಳನ್ನು ಕೇಳಿಸಿಕೊಳ್ಳುವ ಮನಸ್ಸುಗಳು.

ಹೊಸತಲೆಮಾರಿನ ವಿಮರ್ಶಕ. 'ತಕ್ಕ ಮಣ್ಣಿನ ತೇವಕ್ಕಾಗಿ', 'ಕಾಣ್ಕೆ ಕಣ್ಕಟ್ಟು', 'ಬಯಲಾಗುವ ಪರಿ', 'ಕನಕ ಮತ್ತು ಜನಪದ ಲೋಕದೃಷ್ಟಿ' ಮತ್ತಿತರ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.